ಅ) 1994-95, 1995-96ರಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ, ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಮನೆಗಳು ಕೆಳಕಂಡಂತಿವೆ.

	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು.
1994-95	9160	7055	2105
1995-96	60,000	40,904	19,096

ಪ್ರಗತಿಯಲ್ಲಿರುವ ಬಾಕಿ ಮನೆಗಳಿಗೆ ಹುಡ್ಕೋ ಸಂಸ್ಥೆಯಿಂದ ರೂ.46.00 ಕೋಟಿ ಸಾಲದ ಬಿಡುಗಡೆ ನಿಗಧಿತ ವೇಳೆಗೆ ಬಿಡುಗಡೆ ಆಗದೇ ಇದ್ದುದರಿಂದ ಪ್ರಗತಿಯಲ್ಲಿ ಕುಂಠಿತವಾಗಿದೆ ಹುಡ್ಕೋ ಸಂಸ್ಥೆ ಪ್ರಗತಿಯ ಆಧಾರದ ಮೇಲೆ ಇದುವರೆವಿಗೂ ರೂ. 26.00 ಕೋಟಿ ಹಣ ಬಿಡುಗಡೆ ಮಾಡಿದ್ದು, ಉಳಿದ 20,00 ಕೋಟಿ ಹಣವನ್ನು ಫೆಬ್ರವರಿ ಹಾಗೂ ಮಾರ್ಚ್ ಅಂತ್ಯ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಎಲ್ಲಾ ಮನೆಗಳು ಪ್ರಗತಿಯಲ್ಲಿರುವುದರಿಂದ, ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ.

ಸಾರಿಗೆ ಸಂಸ್ಥೆಯ ಖಾಸಗೀಕರಣದ ಕುರಿತು

550 (790) ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಸಂಸ್ಥೆಯನ್ನು ಬಾಗಶಃ ಖಾಸಗೀಕರಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ;

ಆ) ಖಾಸಗಿ ಬಸ್‌ಗಳಿಗೆ ಅನ್ ಕಾಂಟ್ರಾಕ್ಟ್ ಪರ್ಮಿಟ್ ಪದ್ಧತಿಯನ್ನು ಜಾರಿಗೆ ತರಲಾಗುವುದೇ;

ಇ) ಬೆಂಗಳೂರು ಹಾಗೂ ಇತರ ಮುಖ್ಯ ನಗರಗಳ ನಗರ ಸಾರಿಗೆ ಸೌಕರ್ಯ ಒದಗಿಸಲು ಖಾಸಗಿಯವರಿಗೆ ಬಸ್‌ಗಳನ್ನು ಓಡಿಸಲು ಅನುಮತಿ ನೀಡಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಸುರತ್ಕಲ್ ಕ್ಷೇತ್ರದ ಅರಸುಳಿ ಪದವಿನಲ್ಲಿ ದರ್ಖಾಸ್ತು ಭೂಮಿ ಕೊಡುವಲ್ಲಿ ನಡೆದ ಅಕ್ರಮ

551 (792) ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?